# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ.

**ಸಿಸಿ ಸಂಖ್ಯೆ: 307/2022**

**7 ನೇ ಅಕ್ಟೋಬರ್- 2022**

**ಫಿರ್ಯಾದಿ:-** ಸುಕನ್ಯ ಕೋಂ: ಸಿ.ಡಿ.ವೆಂಕಟೇಶ,
ಸುಮಾರು 49 ವರ್ಷ,
ವಾಸ: ಕೃಷ್ಣ ನಗರ,
3 ನೇ ಅಡ್ಡ, ಐ.ಬಿ. ಹಿಂಭಾಗ,
ಪಾಂಡವಪುರ ಟೌನ್,
ಮಂಡ್ಯ ಜಿ:

**:: ವಿರುದ್ಧ ::**

**ಆರೋಪಿ:-** ರವಿಕುಮಾರ್ ಕೆ.ಎಂ. ಬಿನ್
ಮಹದೇವಪ್ಪ ಬಿನ್ ಲೋಕೇಷ,
ಸುಮಾರು 34 ವರ್ಷ,
ವಾಸ: #37, 3 ನೇ ಮಹಡಿ, 11 ನೇ ಕ್ರಾಸ್,
1 ನೇ ಮುಖ್ಯ, ಬಿ.ಎಂ.ಶ್ರೀನಗರ,
ಮೇಟಗಳ್ಳಿ ಪೋಸ್ಟ್, ಮೈಸೂರು ಸಿಟಿ.

## ಆರೋಪಣೆ

**ಶ್ರೀ ಕಿಶೋರ್ ಕುಮಾರ್ ಕೆ.ಎನ್. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಾಂಡವಪುರ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

**:: ದಂಡ ಪ್ರಕ್ರಿಯಾ ಸಂಹಿತೆ ಕಲಂ: 251 ರಡಿಯಲ್ಲಿನ ಆರೋಪ ::-**

**ಆರೋಪಿಯಾದ ನೀವು ಪಿರ್ಯಾದುದಾರರ ಕಡೆಯಿಂದ 3 ನೇ ವಾರದ ಆಗಸ್ಟ್ 2021 ರಂದು 6,00,000/- ರೂ.ಗಳ ಹಣವನ್ನು ಸಾಲವಾಗಿ ಪಡೆದಿದ್ದು, ಇದನ್ನು ತಿರುವಳಿ ಮಾಡುವ ಬಗ್ಗೆ ಕರ್ನಾಟಕ ಬ್ಯಾಂಕ್, ವಿಜಯನಗರ 2 ನೇ ಅಡ್ ಶಾಖೆ, ಮೈಸೂರು ಸಿಟಿ ಗೆ ಸೇರಿದ, 6,00,000/- ರೂ.ಗಳ**

ಚೆಕ್ ನಂ:224161 ದಿನಾಂಕ: 26.11.2021 ನ್ನು ಫಿರ್ಯಾದುದಾರರಿಗೆ ಕೊಟ್ಟಿದ್ದು, ಸದರಿ ಚೆಕ್‌ನಲ್ಲಿನ ಹಣವನ್ನು ಪಡೆಯುವ ಬಗ್ಗೆ ಪಿರ್ಯಾದುದಾರರು ಎಂ.ಡಿ.ಸಿ.ಸಿ ಬ್ಯಾಂಕ್, ಪಾಂಡವಪುರ ಶಾಖೆಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ " ಎನ್ನುವ ಕಾರಣದಿಂದ ಸದರಿ ಚೆಕ್ ಅಮಾನ್ಯಗೊಂಡಿದ್ದು, ತದನಂತರ 30 ದಿನಗಳ ಒಳಗಾಗಿ ಫಿರ್ಯಾದುದಾರರು ಆರೋಪಿಯಾದ ನಿಮಗೆ ದಿನಾಂಕ: 04.01.2022 ರಂದು ನೋಟಿಸ್ ನೀಡಿದ್ದು, ಸದರಿ ನೋಟಿಸ್ ಆರೋಪಿಯಾದ ನಿಮಗೆ **"unclaimed"** ಎಂದು ಹಿಂದಿರುಗಿರುತ್ತದೆ, ನೀವು ಫಿರ್ಯಾದುದಾರರ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ ಕಲಂ:138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ:-ನಿಮಗೆ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೆ?

ಉತ್ತರ:-

ಪ್ರ2:- ನೀವು ಸದರಿ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ-

ಈ ಮೇಲ್ಕಂಡ ಆರೋಪವನ್ನು ಆರೋಪಿಗೆ ಮುಕ್ತ ನ್ಯಾಯಾಲಯದಲ್ಲಿ ಓದಿ ಹೇಳಿ ಆತನು ಹೇಳಿದಂತೆ ಉತ್ತರಗಳನ್ನು ಬರೆದಿರುತ್ತೇನೆಂದು ದೃಢೀಕರಿಸುತ್ತೇನೆ.

(ಕಿಶೋರ್ ಕುಮಾರ್ ಕೆ.ಎನ್.)
ಸಿವಿಲ್ ಜೆಡ್ಜ್ ಮತ್ತು ಜೆಎಂಎಫ್‌ಸಿ,
ಪಾಂಡವಪುರ.

ಆರೋಪಿ ಸಹಿ: